**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52**

**ಸಂಖ್ಯೆ:ಸಿಆರ್‌ಡಿ/ಸಿಎಬಿ-1/ 107 /2018-19** **ದಿನಾಂಕ: 10-07-2018**

1. **ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,**
   **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,**
2. **ವ್ಯವಸ್ಥಾಪಕ ನಿರ್ದೇಶಕರು,**
   **ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರು**
3. **ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,**
4. **ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,**
5. **ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,**
6. **ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು.**

**ಮಾನ್ಯರೇ,**

**ವಿಷಯ :-** 2019-20 ನೇ ಸಾಲಿನಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರ ಆಭರಣಗಳ ಮೇಲೆ ಶೇ.3 ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸಲು 'ಗೃಹಲಕ್ಷಿ ಬೆಳೆ ಸಾಲ ಯೋಜನೆ' ಜಾರಿಗೊಳಿಸುವ ಬಗ್ಗೆ

**ಉಲ್ಲೇಖ:-** ಸರ್ಕಾರದ ಆದೇಶ ಸಂಖ್ಯೆ ಸಿಒ 59 ಸಿಎಲ್‌ಎಸ್ 2019, ಬೆಂಗಳೂರು, ದಿ.10.07.2019

##

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, 2019-20 ನೇ ಸಾಲಿಗೆ ಸಣ್ಣ ಮತ್ತು ಅತೀ ಸಣ್ಣ ರೈತರ ಆಭರಣಗಳ ಮೇಲೆ ಶೇ.3 ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸಲು 'ಗೃಹಲಕ್ಷಿ ಬೆಳೆ ಸಾಲ ಯೋಜನೆ' ಜಾರಿಗೊಳಿಸುವ ಬಗ್ಗೆ ಉಲ್ಲೇಖದಲ್ಲಿ ಸರ್ಕಾರ ಆದೇಶ ಹೊರಡಿಸಿದ್ದು, ಅದರ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸರ್ಕಾರದ ಆದೇಶದನ್ವಯ ಎಲ್ಲಾ ಅವಶ್ಯಕ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಲು ನಿರ್ದೇಶಿಸಲಾಗಿದೆ. ಡಿಸಿಸಿ ಬ್ಯಾಂಕುಗಳು ತಮ್ಮ ವ್ಯಾಪ್ತಿಯಲ್ಲಿ ಸಾಲ ವಿತರಿಸಲು ಬ್ಯಾಂಕಿನ ಶಾಖೆಗಳು ಮತ್ತು ಪ್ಯಾಕ್ಸ್‌ಗಳನ್ನು ಗುರುತಿಸಲು ಮತ್ತು ಪ್ರತೀ ಶಾಖೆಗೆ ಮತ್ತು ಪ್ಯಾಕ್ಸ್ ಗೆ ರೈತರ ಸಂಖ್ಯೆ ಮತ್ತು ಸಾಲದ ಮೊತ್ತದ ಗುರಿಯನ್ನು ನಿಗದಿಪಡಿಸಿ ಅಪೆಕ್ಸ್ ಬ್ಯಾಂಕಿಗೆ ಮತ್ತು ಈ ಕಛೇರಿಗೆ ಸಲ್ಲಿಸಲು ಮತ್ತು ಅಪೆಕ್ಸ್ ಬ್ಯಾಂಕ್ ಜಿಲ್ಲಾವಾರು ಮತ್ತು ಸಂಘ/ಶಾಖೆವಾರು ಗುರಿಯನ್ನು ನಿಬಂಧಕರಿಂದ ಅನುಮೋದನೆ ಪಡೆದು ಸಹಕಾರ ಸಂಸ್ಥೆಗಳಿಗೆ ಗುರಿ ನಿಗದಿಪಡಿಸಿ ಅದರಂತೆ ಸಾಲ ವಿತರಿಸಲು ಕೂಡಲೇ ಕ್ರಮ ವಹಿಸಲು ಸೂಚಿಸಲಾಗಿದೆ.

ವಸೂಲಾತಿ ಆದಾರವಾಗಿ ಸಲ್ಲಿಸಬೇಕಾದ ಬಡ್ಡಿ ಸಹಾಯಧನದ ಬಿಲ್ಲುಗಳ ನಮೂನೆಯನ್ನು ಈ ಕಛೇರಿಯಿಂದ ನಂತರ ನೀಡಲಾಗುವುದು.

ತಮ್ಮ ವಿಶ್ವಾಸಿ

(ಕೆ.ಎಂ ಆಶಾ)

ಸಹಕಾರ ಸಂಘಗಳ ಅಪರ ನಿಬಂಧಕರು

(ಪತ್ತು)

Scanned by CamScanner